

> ಕೊಡಗು ಜಿಲ್ಲೆಗೆ ಕೋವಿಡ್‌ಗೂ ಮೊದಲು ಪ್ರತಿ ತಿಂಗಳು ಅಂದಾಜು 2 ಲಕ್ಷ ಪ್ರವಾಸಿಗರು ಭೇಟಿ ಕೊಡುತ್ತಿದ್ದರು. ಸುಧಾರಣೆ ಕಾಣಲು ಕೆಲವು ತಿಂಗಳುಗಳೇ ಬೇಕು.
>
> **-ರಾಘವೇಂದ್ರ,**
> **ಸಹಾಯಕ ನಿರ್ದೇಶಕ ಪ್ರವಾಸೋದ್ಯಮ ಇಲಾಖೆ ಮಡಿಕೇರಿ**

ಬಳಕೆ ಮುಂತಾದ ಮುನ್ನೆಚ್ಚರಿಕೆ ಕ್ರಮಗಳನ್ನು ದೇವಸ್ಥಾನದಲ್ಲಿ ಕೈಗೊಳ್ಳಲಾಗಿದೆ. ಕೊಲ್ಲೂರು ಸೇರಿದಂತೆ ಕರಾವಳಿಯ ಎರಡೂ ಜಿಲ್ಲೆಗಳ ಬಹುತೇಕ ದೇವಸ್ಥಾನಗಳಲ್ಲಿ ಹೀಗೆ ದರ್ಶನಕ್ಕಷ್ಟೇ ಅವಕಾಶ. ಉಡುಪಿ ಕೃಷ್ಣ ಮಠದಲ್ಲಿಯೂ ಗರ್ಭಗುಡಿಯವರೆಗೆ ಹೋಗಿ ದರ್ಶನಪಡೆಯುವ ಅವಕಾಶ ಇನ್ನೂ ನೀಡಿಲ್ಲ. ಕನಕನಕಿಂಡಿಯವರೆಗೆ ಹೋಗಿ ದರ್ಶನಪಡೆದು ಬರಬಹುದು. ಮುಜರಾಯಿ ಇಲಾಖೆಯಿಂದ ಪ್ರಕಟವಾಗಲಿರುವ ಹೊಸ ಮಾರ್ಗಸೂಚಿಗಳ ನಿರೀಕ್ಷೆಯಲ್ಲಿ ದೇವಸ್ಥಾನಗಳ ಆಡಳಿತ ಸಿಬ್ಬಂದಿ ಇದ್ದಾರೆ.

ಮಂಗಳೂರು ಮತ್ತು ಉಡುಪಿಯ ಸಮುದ್ರದಂಡೆಗಳಲ್ಲಿ ಪ್ರವಾಸಿಗರು ಓಡಾಡುತ್ತಿದ್ದಾರೆ. ಮನರಂಜನೆ ವ್ಯವಸ್ಥೆ ಇರುವ ಬೀಚ್‌ಗಳು ಮೌನವಾಗಿವೆ. ಪ್ರವಾಸಿಗರು ಸಮುದ್ರದಂಡೆಯುದ್ದಕ್ಕೂ ಹೆಜ್ಜೆ ಹಾಕಬೇಕಷ್ಟೇ. ಒಂಟೆ ಸವಾರಿ, ಕುದುರೆ ಸವಾರಿ, ದೋಣಿ ಸವಾರಿ ಮುಂತಾದ ಗಮ್ಮತ್ತುಗಳಿಗೆ ಅವಕಾಶವಿಲ್ಲ. ಆದರೂ ಆಗಸ್ಟ್ ಕೊನೆಯವಾರ, ಸೆಪ್ಟೆಂಬರ್ ಮೊದಲ ವಾರಗಳಲ್ಲಿ ಬೀಚ್‌ಗಳಲ್ಲಿ ಪ್ರವಾಸಿಗರ ಸಂಖ್ಯೆ ಗಿಜಿಗುಡುತ್ತಿತ್ತು. ಬಸ್ಸುಗಳ ಸಂಖ್ಯೆ ಕಡಿಮೆಯಾದರೂ, ಖಾಸಗಿ ವಾಹನಗಳಲ್ಲಿ ಬರುವವರೇ ಹೆಚ್ಚು.

## ಮೈಸೂರಿನ ವೈಭವ ಮರಳಿ ಹಳಿಯತ್ತ

ಮೈಸೂರಿನ ಪ್ರವಾಸಿತಾಣಗಳ ಪಟ್ಟಿ ಬೇಕಾದವರು 'ನೆನಪಿರಲಿ' ಚಿತ್ರದ ಈ ಹಾಡನ್ನು ಒಮ್ಮೆ ಕೇಳಿದರೆ ಸಾಕು.

'ಕೂರಕ್ ಕುಕ್ಕಳ್ಳಿ ಕೆರೆ/ ತೇಲಕ್ ಕಾರಂಜಿ ಕೆರೆ/ ಚಾಮುಂಡಿ ಬೆಟ್ಟ ಇದೆ/ ಕನ್ನಂಬಾಡಿ ಕಟ್ಟೆ ಇದೆ' ಎಂದು ಬೆಳೆಯುತ್ತ ಹೋಗುವ ಹಾಡು ಕೆ.ಆರ್.ಎಸ್., ಶ್ರೀರಂಗಪಟ್ಟಣ, ನಂಜನಗೂಡು, ರಂಗನತಿಟ್ಟು ಹೀಗೆ ಮೈಸೂರು ಸುತ್ತಮುತ್ತಲಿನ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನೂ ಪಟ್ಟಿ ಮಾಡುತ್ತದೆ. ಈ ಹಾಡು ಶುರುವಾಗುವುದೇ 'ಅರೆ ಯಾರ್ರೀ ಹೆದರ್ ಕೊಳ್ಳೋರು/ ಬೆದರ್ ಕೊಳ್ಳೋರು/ ಪೇಚಾಡೋರು, ಪರದಾಡವ್ರು' ಎಂದು. ಸಿನಿಮಾದಲ್ಲಿ ಪ್ರೇಮಿಗಳನ್ನು ಉದ್ದೇಶಿಸಿ ಹೇಳಿದ ಈ ಮಾತು ಇಂದು ಎಲ್ಲರಿಗೂ ಅಕ್ಷರಶಃ ಅನ್ವಯಿಸುವಂತಿದೆ. ಇಡೀ ಮೈಸೂರೇ ಈ ಹಾಡನ್ನು ಗುನುಗುತ್ತ ಪ್ರವಾಸಿಗರ ಎದೆಯಲ್ಲಿನ ಭಯವನ್ನು ಕರಗಿಸಿ ಕೈಬೀಸಿ ಕರೆಯುತ್ತಿರುವಂತೆ ಭಾಸವಾಗುತ್ತಿದೆ.

ಮೈಸೂರು ಹಾಗೂ ಸುತ್ತಮುತ್ತಲಿನ ಪ್ರಮುಖ ಪ್ರವಾಸಿ ತಾಣಗಳಾದ ಅಂಬಾವಿಲಾಸ ಅರಮನೆ, ಚಾಮರಾಜೇಂದ್ರ ಮೃಗಾಲಯ, ಚಾಮುಂಡಿಬೆಟ್ಟ, ನಂಜನಗೂಡು, ಶ್ರೀರಂಗಪಟ್ಟಣ, ತಲಕಾಡು ಪ್ರವಾಸಿಗರಿಲ್ಲದೆ ಭಣಗುಟ್ಟುತ್ತಿವೆ. ಕೆಆರ್‌ಎಸ್– ಬೃಂದಾವನ ಉದ್ಯಾನ, ರಂಗನತಿಟ್ಟು ಇನ್ನೂ ತೆರೆದಿಲ್ಲ.

ಸಾಂಸ್ಕೃತಿಕ ನಗರಿ ಮೈಸೂರಿಗೆ ಹಿಂದೆ ವರ್ಷದ ಎಲ್ಲಾ ದಿನಗಳಲ್ಲೂ ಪ್ರವಾಸಿಗರು ಹರಿದು ಬರುತ್ತಲೇ ಇದ್ದರು. ಆದರೆ ಈ ವರ್ಷ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ. ಪ್ರವಾಸೋದ್ಯಮವನ್ನೇ ನಂಬಿ ಬದುಕುತ್ತಿರುವ ಇಲ್ಲಿನ ಹೋಟೆಲ್, ಲಾಡ್ಜ್, ಪ್ರವಾಸಿ ಸ್ಥಳದ ಅಂಗಡಿಗಳು, ಟ್ಯಾಕ್ಸಿಗಳು, ಆಟೊ ಚಾಲಕರು ಪ್ರವಾಸಿಗರಿಲ್ಲದೇ ಕಳೆದ ಆರು ತಿಂಗಳಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಟೂರಿಸ್ಟ್ ಗೈಡ್‌ಗಳು, ಟೂರಿಸ್ಟ್ ಫೋಟೊಗ್ರಾಫರ್ಸ್, ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ.

> ಕೋವಿಡ್ ಭಯದಿಂದ ಜನರು, ಬೇರೆ ರಾಜ್ಯಗಳ ಪ್ರವಾಸಿ ತಾಣಕ್ಕೆ ಭೇಟಿ ಕೊಡುವ ಸಾಧ್ಯತೆ ಕಡಿಮೆ. ಸ್ಥಳೀಯ ಪ್ರವಾಸಿ ತಾಣಕ್ಕೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ
>
> **-ನಾಗೇಂದ್ರಪ್ರಸಾದ್,**
> **ಅಧ್ಯಕ್ಷ, ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರ ಸಂಘ ಕೊಡಗು**

'ಮೈಸೂರಿನ ಶೇ 30ರಷ್ಟು ಮಂದಿ ಪ್ರವಾಸೋದ್ಯಮ ನಂಬಿ ಬದುಕುತ್ತಿದ್ದಾರೆ. ಈ ವಲಯಕ್ಕೆ ಪ್ರತಿದಿನ ಅಂದಾಜು ₹ 50 ಕೋಟಿ ಆದಾಯ ನಷ್ಟ ಉಂಟಾಗುತ್ತಿದೆ. ಹಲವು ಹೋಟೆಲ್‌ಗಳು ಮುಚ್ಚಿವೆ. ಲಾಡ್ಜ್‌ಗಳು ಶೇ 90ರಷ್ಟು ಖಾಲಿ ಬಿದ್ದಿವೆ' ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಹೇಳುತ್ತಾರೆ.

ವಾರಾಂತ್ಯದಲ್ಲೂ ಬೆರಳೆಣಿಕೆ ಮಂದಿ ಕಾಣಿಸುತ್ತಿದ್ದಾರೆ. ಪ್ರಮುಖವಾಗಿ ಹಿಂದೆಲ್ಲ ಮಕ್ಕಳ ಕಲರವ ಜೋರಾಗಿರುತ್ತಿತ್ತು. ಈಗ ಮಕ್ಕಳು ಮನೆಯಲ್ಲೇ ಬಂದಿಯಾಗಿದ್ದಾರೆ. ಶಾಲಾಕಾಲೇಜಿಗೆ ರಜೆ ಇದ್ದರೂ ಪ್ರವಾಸಿ ತಾಣಗಳಲ್ಲಿ ಮಕ್ಕಳ ಸುಳಿವು ಇಲ್ಲ. ವಿದೇಶಿಗರು ಅಲ್ಲದೇ, ಇತರ ರಾಜ್ಯಗಳಿಂದಲೂ ಪ್ರವಾಸಿಗರು ಬರುತ್ತಿದ್ದರು. ಅದೀಗ ಸಂಪೂರ್ಣ ನಿಂತು ಹೋಗಿದೆ.

ಮೈಸೂರು ಅರಮನೆ ಸುತ್ತಮುತ್ತ ಮೊದಲಿನ ವಾತಾವರಣ ಇಲ್ಲ. ಬೆರಳೆಣಿಕೆ ಪ್ರವಾಸಿಗರಷ್ಟೇ ಕಾಣಿಸುತ್ತಾರೆ. ಇನ್ನೂ ಅರಮನೆ ವಿದ್ಯುತ್ ಅಲಂಕಾರ ಆರಂಭಿಸಿಲ್ಲ. ದಸರಾ ಮಹೋತ್ಸವ ಬೇರೆ ಸಮೀಪಿಸುತ್ತಿದೆ. ಅದಕ್ಕೂ ಸರಿಯಾಗಿ ಸಿದ್ಧತೆ ಆರಂಭವಾಗಿಲ್ಲ.

ರಾಜ್ಯದ ನಂಬರ್ ಒನ್ ಮೃಗಾಲಯಕ್ಕೆ ಪ್ರತಿನಿತ್ಯ ಸರಾಸರಿ ನಾಲ್ಕು ಸಾವಿರ ಪ್ರವಾಸಿಗರು ಬರುತ್ತಿದ್ದರು. ಈಗ ಅದರ ಶೇ 30ರಷ್ಟು ಮಂದಿಯೂ ಬರುತ್ತಿಲ್ಲ. ಮೃಗಾಲಯದ ನಿರ್ವಹಣೆ, ಸಿಬ್ಬಂದಿಯ ವೇತನ ಮತ್ತು ಪ್ರಾಣಿಗಳ ಆಹಾರ ಸೇರಿ ತಿಂಗಳಿಗೆ ₹ 2 ಕೋಟಿಯಷ್ಟು ಹಣ ಬೇಕಿದೆ. ಈಗ ಆದಾಯಕ್ಕೆ ಪೆಟ್ಟು ಬಿದ್ದಿದೆ.

ಚಾಮುಂಡಿಬೆಟ್ಟಕ್ಕೆ ಬರುವವರ ಸಂಖ್ಯೆಯೂ ತೀರ ಹೇಳಿಕೊಳ್ಳುವಂತಿಲ್ಲ. ಉಳಿದ ಪ್ರದೇಶಗಳಿಗೆ